# ಪ್ರಬಂಧ

ನಿಜಕ್ಕೂ ಕಲ್ಲು ಎಸೆಯುತ್ತಿದ್ದಾರೋ ಅಥವಾ ಆಳುಮಕ್ಕಳು ಹೇಳುವ ಭೂತ ಚೇಷ್ಟೇ ಅಂದ್ರೆ ಇದೇನಾ! ಎಂದೂ ಅನಿಸಿತ್ತು. ಸ್ವಲ್ಪ ಹೊತ್ತಿನಲ್ಲಿ ಬಂದ ಪತಿ 'ಓಹ್, ಅದು ರಬ್ಬರಿನ ಬೀಜ ಸಿಡಿದು ಬೀಳುವ ಶಬ್ದ' ಎಂದಾಗ ನಗು ಬಂದಿತ್ತು. ಈ ಪ್ರಕೃತಿಯ ಹೆಜ್ಜೆಗಳನ್ನು ನಾವು ಅರಿತೇ ಇಲ್ಲವಲ್ಲ ಎಂದು. ಅಂದು ಶಬ್ದ ಭಯ ಹುಟ್ಟಿಸಿದ್ದರೆ ಇಂದು ಈ ನಿಶ್ಶಬ್ದವೂ ಗಾಬರಿಗೊಳಿಸುತ್ತಿದೆಲ್ಲವೇ! ಅಲ್ಲಾ, ಅಂಗಳದ ಅಂಚಿಗೆ ನೆಟ್ಟ ಬಾಳೆ ಕುಡಿಯೊಡೆಯುವ ಮುನ್ನವೇ ಸಿಗಿದು ಹಾಕಿ ಚೀಪಿ ಎಸೆದು ಹೋಗುವ ಕೋತಿಗಳ ಪಟಲಾಂ ಕೂಡ ಕಾಣಿಸುತ್ತಿಲ್ಲ ಎಂದರೆ ಆ ಕ್ಷಣದಲ್ಲಿ ಅನಿಸಿತು, ಪ್ರಪಂಚವೇನಾದರು ನಿಂತು ಬಿಟ್ಟಿತೇ ಹೇಗೆ? ಕರ್ಮ, ಕರೆಂಟಿಲ್ಲದೇ ನನ್ನ ಫೋನೂ ಚಾರ್ಜ್ ಮುಗಿದು ಮುರಿದ ಕನ್ನಡಿಯ ತುಂಡಿನಂತೇ ಹಾಸಿಗೆಯ ಮೇಲೆ ಬಿದ್ದುಕೊಂಡಿದೆ. ಈಗ ಈ ಶಬ್ದವೇ ಇಲ್ಲದ ನಿಶ್ಶಬ್ದ; ಸ್ವಲ್ಪ ಅಂಜಿಕೆ ಹುಟ್ಟಿಸಿತು. ಗಟ್ಟಿಯಾಗಿ ಕೂಗಿದರೆ ಕೇಳುವ ಕಿವಿ ಸಿಗಬೇಕಾದರೆ ಕನಿಷ್ ಫರ್ಲಾಂಗು ದೂರ ನಡೆಯಬೇಕು. ನಿರಂತರ ಸದ್ದು ಕೇಳಿದ್ದ ನನ್ನ ಕಿವಿ ಈಗ ಸದ್ದನ್ನು ಕೇಳಲು ಹಾತೊರೆಯತೊಡಗಿತು. ನಾನು ಅಕ್ಷರಶಃ ಕಿವಿಯಾದೆ. ಮತ್ತೆ ಕ್ಷಣಗಳು ಸರಿದಂತೇ ಕಿವಿಯ ಕಿವಿಯಾಗತೊಡಗಿದೆ. ಕಣ್ಣೂ ಮುಚ್ಚಿದೆ!

ಕಣ್ಣು ತಿರುಗಿಸಿದಾಗ ಸೂರಿನಲ್ಲಿ ನೂರಾರು ಉಲ್ಲನಿನ ಜೀವಗಳು. ಗೋಡೆಯ ಮೇಲೂ! ಓಹ್ ಜಾತ್ರೆ ನಡೆಯುತ್ತಿದೆ! ಆ ಕ್ಷಣದಲ್ಲಿ ಚೂರೂ ಸಿಟ್ಟು ಬಾರದೇ ಅವುಗಳನ್ನು ಹಾಗೇ ಅಕ್ಕರೆಯಿಂದ ನೋಡುತ್ತಿದ್ದೆ. ಎಂಥ ಧ್ಯಾನದಲ್ಲಿವೆ ಈ ಹುಳಗಳು. ಜೀವವೊಂದು ಒಂದು ಅವಸ್ಥೆಯಿಂದ ಇನ್ನೊಂದಕ್ಕೆ ಹೋಗಬೇಕಾದರೆ ಈ ಕೋಶಾವಸ್ಥೆಯ ಧ್ಯಾನ, ಮೌನ ಅಗತ್ಯವೇನೋ! ಒಂದು ರೀತಿಯ ಟ್ರಾನ್ಸ್‌ಗೆ ಹೋದಂತೆ ಗಾಜಿನಲ್ಲಿಟ್ಟ ಬೊಂಬೆಗಳನ್ನು ನೋಡುವಂತೇ ಒಂದು ಕಡೆಯಿಂದ ನೋಡುತ್ತಾ ಸಾಗುತ್ತಿದ್ದೆ. ಎಲ್ಲಾ ಹುಳಗಳು ಧ್ಯಾನಸ್ಥವಾಗಿವೆ. ಹಾಗಾದರೆ ಇವುಗಳು ಹುಳಗಳಾಗೋದು ಹೇಗೆ? ಅಲ್ಲ, ಇವು ಅಪ್ಪಟ ಜೀವಗಳು.. ತಂತಮ್ಮ ಒಂದು ಅವಸ್ಥೆಯಿಂದ ಬಿಡಿಸಿಕೊಂಡು ಇನ್ನೊಂದು ಹೊಸದೇ ಆದ ಅವಸ್ಥೆಗೆ ಹೊರಳಲು ಧ್ಯಾನ್ಯ ಮಾಡುತ್ತಿರುವ ಜೀವಗಳು.. ಸುತ್ತಲೂ ನೂರಾರು ಜೀವಗಳಿವೆ. ವಿಧವಿಧದ, ಬಣ್ಣಬಣ್ಣದ, ಸಣ್ಣ ರೆಕ್ಕೆಯ ದೊಡ್ಡ ರೆಕ್ಕೆಯ ಸಣ್ಣ ಮೀಸೆಯ ಅಗಲ ಮೀಸೆಯ ಎಷ್ಟೊಂದು ಜೀವಗಳಿವೆ. ಗೋಡೆಯ ಬಳಿಗೆ ಹೋಗಿ ನೋಡಿದಾಗ ಪ್ರತೀ ಕಂಬಳಿ ಹುಳದ ಸುತ್ತ ಅತ್ಯಂತ ನಾಜೂಕಾದ ಬಲೆ ಹೆಣೆದಿದ್ದು ಕಂಡಿತು. ಅಂದರೆ ಇದರೊಳಗೆ ಜೀವದ ರೂಪಾಂತರ ಕ್ರಿಯೆ ಸದ್ದಿಲ್ಲದೇ ನಡೆಯುತ್ತಿದೆ. ಹಾಗಾದರೆ ಪ್ರಕೃತಿಯ ದೊಡ್ಡ ಜೀವವಾದ ಮನುಷ್ಯನಿಗ್ಯಾಕೆ ಈ ಹೊಸ ಅವಸ್ಥೆ ಒಪ್ಪಿಕೊಳ್ಳಲು ಆಗುತ್ತಿಲ್ಲ... ನಾನೇ ದೊಡ್ಡ ಹುಳವೆಂದು ಅನಿಸಿತು.

ಇವೆಲ್ಲವೂ ಕಳಚಿಕೊಳ್ಳುವ, ಕಳಚಿಕೊಂಡು ಹೊಸದೇ ಆಗುವ ಮಾರ್ಗದಲ್ಲಿದ್ದರೆ ನಾನು ಇನ್ನೂ ಅದೇ ಜಾಗದಲ್ಲಿ ಗೂಟವೂರಿದ್ದೇನೆಯೇ... ಜೇಡವೊಂದು ಎಷ್ಟು ನಾಜೂಕಾಗಿ ಯಾವುದೇ ಶಬ್ದ ಮಾಡದೇ ಬಲೆ ಹೆಣೆದುಕೊಂಡು ಜೀವಕ್ರಿಯೆ ನಡೆಸುತ್ತಿದೆ. ಈ ಸದ್ದಿಲ್ಲದೇ ಇರುವ ಸ್ತಬ್ಧತೆಯ ಒಳಗೆ ಭಯಂಕರವಾದ ಚಟುವಟಿಕೆಗಳು ನಡೆಯುತ್ತಿರುವುದು ಖಾತ್ರಿಯಾಯ್ತು. ಇಲ್ಲಿ ಸಮಯದ ನಿರ್ಬಂಧವಿಲ್ಲದೇ ಅನೇಕ ಪಾಳಿಗಳಲ್ಲಿ ಕೆಲಸ ನಡೆಯುತ್ತಿದೆ. ಕಂಬಳಿ ಹುಳಗಳ ಬಲೆ ಕಣ್ಣಿನ ಒಳಕ್ಕೆ... ಒಳಗಣ್ಣಿನೊಳಕ್ಕೆ ಅದರ ಒಳಗೆ... ಅದರ ಇನ್ನೂ ಒಳಗನ್ನು ತೋರುತ್ತಿದ್ದಂತೇ ಒಂದೊಂದೇ ಶಬ್ದ ಕಿವಿಗೆ ಬೀಳಲಾರಂಭಿಸಿತು. ಹೋ! ಇಲ್ಲೊಂದು ಪ್ಯಾರಲಲ್ ಪ್ರಪಂಚನೇ ಸುತ್ತುತ್ತಿದೆ! ಇಲ್ಲಿ ಮಾತಿದೆ. ಸಂಬಂಧವಿದೆ. ಅಂಟಿಕೊಳ್ಳದ ಸರಸವಿದೆ. ಆ ಕಾರಣಕ್ಕೆ ಹುಟ್ಟು ಇದೆ. ಬದುಕೂ ಇದೆ..ನಾನೆಂಥ ಪೆದ್ದಿ!

ಮತ್ತೆ ನಿರುಕಿಸಿದಾಗ ಬಲೆಯೊಂದು ತೆಳುವಾದ ಸಿಪ್ಪೆಯಾಗಿ ಬದಲಾಗಿದೆ. ಇನ್ನೊಂದರ ಸಿಪ್ಪೆ ಅರೆ ತೆರೆಯುತ್ತದೆ. ಓಹ್ ಈ ಸಿಪ್ಪೆಯಿಂದ ಬಣ್ಣದ ಚಿಟ್ಟೆಯೊಂದು ಕೊಂಚ ಕೊಂಚವೇ ರೆಕ್ಕೆ ಅಗಲಿಸುತ್ತಾ ಹೊರ ಬರುತ್ತಿದೆ. ಓಹೋ, ಇದು ಹಾರುತ್ತಿದೆ. ಪಕ್ಕದ ಪೊರೆಯೂ ಕಳಚುತ್ತಿದೆ. ಹಳದಿ, ಕಪ್ಪು, ನೀಲಿ, ಹಸಿರು, ಕೆಂಬಣ್ಣದ, ಬಿಳಿಯ ಚಿಟ್ಟೆಗಳು ರೆಕ್ಕೆ ಹೊಡೆದುಕೊಂಡು ಹಾರಾಡಲು ಶುರುವಿಟ್ಟುಕೊಂಡವು. ನೋಡುತ್ತಾ ನೋಡುತ್ತಾ ನಾನು ಹಗುರವಾಗುತ್ತಿದ್ದೆನೆ ಎನ್ನುವ ಅರಿವಾಗತೊಡಗಿತು...ಸ್ವಲ್ಪ ಹೊತ್ತಿನಲ್ಲಿ ನನ್ನ ಕಾಲುಗಳು ನೆಲದ ಮೇಲೆ ಇಲ್ಲವೆನೋ ಅನಿಸಿ ನೋಡಿದರೆ ಹೌದು! ನಾನು ನೆಲದ ನಂಟು ಕಳಚಿಕೊಂಡಿದ್ದೇನೆ ಅನಿಸಿತು.